636

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಿದವರ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ ಅಥವಾ ತರೀ ಬಾಗಾಯತು.	ಜಮೀನು. ವಿಸ್ತೀರ್ಣ.	ಜಮೀನು. ಆಕಾರ.	ಸರಕಾರಕ್ಕೆ ಬರಬೇಕಾದ ಸೋಟಿನ ಪೈಕೀ ಇನ್ನೂ ಸಂದಾಯವಾದ ಬಾಕೀ ಮೊಬಲಗು.
1	2	3	4	5	6	7	8	9	10	11

								ಖಂ.	ಕೂ.	ರೂ.	ಆ.	ಪೈ.	ರೂ.	ಆ.	ಪೈ.	
ಕೋಲಾರ.	ಕೋಲಾರ ದಕ್ಷಿಣ ಜೋಡಿ	ಕೊಂಡರಾಜನಹಳ್ಳಿ	ರಾಘವೇಂದ್ರಾಚಾರ್	..	ರೂ.ಆ.ಪೈ.	ಗ್ರಾಮದಲ್ಲಿ ಬಾಕೀದಾರನ ಹೆಸರಿನ	ಖುಷ್ಕೀ ತರೀ ಬಾಗಾಯತು ಸಾಲಿಯಾನಾ ಸ	13	12¾	51	0	1	43	12	1	ಕೋಲಾರ ತಾಲ್ಲೂಕು ಅಮಲ್ದಾರ್ರು ರೂಬರೂ
							ರ್ತಾರಕ್ಕೆ ಕೊಡಬೇಕಾದ್ದು			43	12	4				
	ಬಳ್ಳನೂರು ಜಯನಂದ್ರ ಜೋಡಿ	ಗ್ರಾಮ	ಚಿಕ್ಕ ರಾಮಂಣ	..	..	ಗ್ರಾಮದಲ್ಲಿ ಬಾಕೀದಾರನ ಹೆಸರಿನ	ಖುಷ್ಕೀ ತರೀ ಬಾಗಾಯತು	12	14¼	29	0	0	20	6	5	ಚಿಟೋ
									ಜುಮ್ಲಾ				199	4	9	

ಹರಾಜು ಮಾಡುವ ಸ್ವತ್ತುಗಳ ಮೇಲೆ ಪೂರ್ವೀಕರು ಮಾಡಿದ ಭೋಗ್ಯ ಪರಿಬಾಧಕವಿಲ್ಲದೆ ಮಾಡಲ್ಪಡುತ್ತೆ.

ಸಿ. ಮಾದಯ್ಯ,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ಯ 1894—95ನೇ ಇಸವಿ ಅರ್ಜೀ ನಂಬರ್ 365.

ಮೃತಪಟ್ಟ ಶಾನಭೋಗ ಕೃಷ್ಣಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜಿದಾರು, ನರಶಿಹ್ಮಾಚಾರ್ ಮೈನರ್, ಗಾರ್ಡಿಯರ್ ದೊಡ್ಡಪ್ಪ ಆನಂದಾಳ್ವಾರ್, ಮೃತಪಟ್ಟ ಸದರೀ ಕೃಷ್ಣಯ್ಯಂಗಾರ್ರಿಗೆ ಮೈನರ್ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮಂಡ್ಯದ ತಾಲ್ಲೂಕು ಹೊನ್ನೆಲಗೆರೆ ಸ್ಥಳದ ಸದರೀ ಆನಂದಾಳ್ವಾರ್, ಸದರೀ ವಾನಸ್ಥರಾಗಿ ಮೃತಪಟ್ಟ ಕೃಷ್ಣಯ್ಯಂಗಾರ್ರ ಜಿಂದಗಿಬಗ್ಯಾಗಿ ಬರತಕ್ಕ 600 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟ್ಯ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಆನಂದಾಳ್ವಾರ್ರ ಅರ್ಜಿಯನ್ನು ಸ್ಯ 1895ನೇ ಇಸವಿ ಜೂ ತಿಂಗಳ ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1894—95ನೇ ಇಸವಿ ಅರ್ಜೀ ನಂಬರ್ 403.

ಅರ್ಜಿದಾರ್ 1ನೇ ಅಮ್ಮಣ್ಣಿ ಬಾಯಿ ವುರಫ್ ಲಕ್ಷ್ಮಂಬಾಯಿ, 2ನೇ ದ್ವಾರಕಾಬಾಯಿ ಇವರುಗಳು, ಮೈಸೂರ್ ಸ್ಥಳದ ಪೆಟ್ಟ್ಯದ ವೆಂಕೋಬಾಚಾರ್ರ ಆಸ್ತೀ ವಿಷಯದಲ್ಲಿ—

ಸದರೀ ವೆಂಕೋಬಾಚಾರ್ರಿಗೆ ಹೆಂಡತಿ, ಮಗಳು ಆಗಬೇಕೆಂಬ ಹಕ್ಕಿನಮೇಲೆ ಮೈಸೂರ್ ದೇವೀರಾಂಬಾ ಅಗ್ರಹಾರ ಸ್ಥಳದ ಮೇಲ್ಕಂಡ 1—2ನೇ ಅರ್ಜಿದಾರ್ರು, ಸದರೀ ವೆಂಕೋಬಾಚಾರ್ರ ಆಸ್ತೀ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಅರ್ಜಿಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಯೆ 1895ನೇ ಇಸವಿ ಜುಲೈ ತಾರೀಖು 12ರಲ್ಲಿ ವೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸ್ಯ 1894—95ನೇ ಇಸವಿ ಅರ್ಜೀ ನಂಬರು 408.

ಮೃತಪಟ್ಟ ನರಸುಹ್ಮಗವುಡ ಮತ್ತು ಕುಂಟೆಗವುಡರ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ರು ದೊಡ್ಡರಾಮ ವಗೈರೆ ಮೈನರ್, ಗಾರ್ಡಿಯರ್ ತಾಯಿ ಭದ್ರಮ್ಮನವರು, ಮೃತಪಟ್ಟ ಸದರೀ ನರಸುಹ್ಮಗವುಡ ಕುಂಟೆಗವುಡರಿಗೆ ಮೈನರ್ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ತಾಲ್ಲೂಕು ಲಿಂಗಾಂಬುಧಿ ಹೋಬಳಿ ಹೆಬ್ಬಾಳು ದಾಖಲೆ ಮಂಚುಗೌಡನ ಕೊಪ್ಪಲು ಸ್ಥಳದ ಸದರೀ ಭದ್ರಮ್ಮನವರು, ಸದರೀ ವಾನಸ್ಥರಾಗಿ ಮೃತಪಟ್ಟ ನರಸುಹ್ಮಗವುಡ ಕುಂಟೆಗವುಡರ ಜಿಂದಗಿ ಬಗ್ಯಾಗಿ ಬರತಕ್ಕ 3,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟ್ಯ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಭದ್ರಮ್ಮನವರ ಅರ್ಜಿಯನ್ನು ಸ್ಯ 1895ನೇ ಇಸವಿ ಜುಲೈ ತಿಂಗಳ ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸುಂಹಗವುಡ ಕುಂಟೆಗೌಡರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1894—95ನೇ ಇಸವಿ ಅರ್ಜೀ ನಂಬರ್ 410.

ಮೃತಪಟ್ಟ ಚಿಕ್ಕಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜಿದಾರು ಕೆಂಪಮ್ಮನವರು ಮೃತಪಟ್ಟ ಸದರೀ ಚಿಕ್ಕಣ್ಣನವರಿಗೆ ಅಕ್ಕ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ತಾಲ್ಲೂಕು ಜೆಂಧ್ಯಗಾಲ್ ಹೋಬಳಿ ಹಂಪಾಪುರ ಸ್ಥಳದ ಸದರೀ ಕೆಂಪಮ್ಮನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಚಿಕ್ಕಣ್ಣನವರ ಜೆಂದಗಿ ಬಗ್ಯಾಗಿ ಬರತಕ್ಕ 350 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರ ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೆಂಪಮ್ಮನವರ ಅರ್ಜಿಯನ್ನು 1895ನೇ ಇಸವಿ ಜುಲೈ ತಿಂಗಳ ತಾರೀಖು 12ರಲ್ಲು ಕೇಳಿ ಸರ ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿವರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಣ್ಣನವರ ಆಸ್ತಿಗೆ ಹಕ್ಕು ದಾರರಾದ ವಿಶಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1895ನೇ ಇಸವಿ ಏಪ್ರೆಲ್ ತಿಂಗಳ 10ನೇ ತಾರೀಖಿನಲ್ಲಿ ಕೋರ್ಟು ವೊಹರ್ ನಿಶಿ ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

ಯಂ. ರಾಮಸ್ವಾಮಯ್ಯರ್,
ಅಫಿಷಿಯೇಟಿಂಗ್ ಡಿಸ್ಟ್ರಿಕ್ಟ್ ಜಡ್ಜ್.

ನೋಟಿಫಿಕೇಷ್ಯ.

ಸ್ಯ 1895ನೇ ಇಸವಿ ಮೇ ತಾರೀಖು 13ರಲ್ಲು.

ಸ್ಯ 1895ನೇ ಇಸವಿ ಮೇ 4—7ನೇ ಮುಕ್ಕಂ 19567—8 ಜಿ. 5182ನೇ ನಂಬರ್ ಮೈಸೂರು ಗವರ್ಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ, ಸ್ಯ 1894ನೇ ಇಸವಿ ಜೂನ್ 21ನೇ ಮುಕ್ಕಂ ಮೈಸೂರ ಗೆಜೆಟ್ 2ನೇ ಭಾಗ 481ನೇ ಪೇಜಿನಲ್ಲಿ ಪ್ರಾಯಿಷ್ ಆಗಿರುವ ನೋಟಿಫಿಕೇಷ್ಯನನ್ನು ತಿದ್ದುಪಡಿ ಮಾಡುವದೇನಂದರೆ:—

1. ಕೊಪ್ಪ .. ..
2. ಮುತ್ತೂರು .. ..
3. ಆನೇಚೌಕೂರು
4. ಕೆಕ್ಕನಹಳ್ಳಿ ಸ್ಟೇಷ್ಯ

ಈರೇಬಿನಲ್ಲಿ ನಮೂದು ಮಾಡಿರುವ ಟೋಲ್‌ಯಾನೆ ಸುಂಕದ ಕಟ್ಟೆಗಳನ್ನು, ತಗದು ಸದರೀ ಕಟ್ಟೆಗಳಿಗೆ ಬದಲಾಗಿ ಇದರಡಿ ನಮೂದಿಸಿರುವ ಸ್ಥಳಗಳಲ್ಲಿ ಟೋಲ್‌ಯಾನೆ ಸುಂಕವನ್ನು, ಮೊದಲಿನ ನೋಟಿಫಿಕೇಷ್ಯನಲ್ಲಿ ಕಂಡ ರೇಟಿನಂತೆಯೇ, ಸ್ಯ 1895ನೇ ಇಸವಿ ಜೂನ್ ಗುರ್ರೇ ಲಾಗಾಯತು ವಸೂಲ್ ಮಾಡಲ್ಪಡುತ್ತೆಂಬುವದನ್ನು ಇದರಿಂದ ಸಮಸ್ತರಿಗೂ ತಿಳಿಯಪಡಿಸಿರುತ್ತೆ.

ರೋಡುಗಳು.	95ನೇ ಜೂನ್ ಗುರ್ರೇ ಲಾಗಾಯತು ಸ್ಟೇಷ್ಯಗಳು.
ಮಂಗಳೂರು ರಸ್ತೆ	ಪೆರ್ಯಾಪಟ್ಟಣದ ಕೋಟೆಗೆ ಪಶ್ಚಿಮ ಭಾಗದಲ್ಲಿ, ಎರಡು ರಸ್ತೆಯೂ
ಸಿದ್ದಾಪುರ ಬ್ರಾಂಚ್	ಕೇರತಕ್ಕ ಸ್ಥಳ
ಹಾರ್ಸ್ ಪೆರ್ಯಾಪಟ್ಟಣ ಕನ್ಯಾನೂರು ..	ಪೆರ್ಯಾಪಟ್ಟಣಕ್ಕೂ ಅಂಕನಹಳ್ಳಿಗೂ ಮಧ್ಯೆ
ಮದ್ರಾಸ್ ಕನ್ಯಾನೂರು	ಪಂಚವಳ್ಳಿ
ಬೆಂಗಳೂರು ನೀಲಗಿರಿ	ಭಂಡೀಪುರ

2. ಈ ಡಿಸ್ಟ್ರಿಕ್ಟಿನಲ್ಲಿ ಮೇಲ್ಕಂಡ ರಸ್ತೆ ವಿನಹ ಇತರ ರಸ್ತೆಗಳಲ್ಲಿ ಇಡಲ್ಪಟ್ಟಿರುವ ಟೋಲ್‌ಯಾನೆ ಸುಂಕದ ಕಟ್ಟೆಗಳು, ಇದರಿಂದ ಬದಲಾಯಿಸಲ್ಪಟ್ಟಿಲ್ಲ.

ಎ. ರಂಗಸ್ವಾಮಯ್ಯಂಗಾರ್,
ಡೆಪ್ಯೂಟಿ ಕಮ್ಮಿಷನರ್.

ತಾರೀಖು 10ನೇ ಮೇ 1895.

ಇದರಿಂದ ಪ್ರಕಟಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನ ಇದರಡಿ ಕಂಡ ತಾಲ್ಲೂಕು ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲೂ ಹಿಡುವಳಿಯಲ್ಲಿ ಇಲ್ಲದ ಕಂದಾಯ ಗೊತ್ತು ಮಾಡಿರುವ ಜಮೀನುಗಳು ಅಡಗಿರುವ ಸರಕಾರೀ ಬಂಜರ್ ಜಮೀನುಗಳಲ್ಲಿಯೂ ಅವೃಷಭಮಜಲ್ ಕಾವಲ್‌ಗಳಲ್ಲೂ ಹಳೆ ಮತ್ತು ಹೊಸ ಡಿಮಾರ್ಕೇಷ್ಯ ಲೈನ್‌ಗಳ ಮಧ್ಯೆ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲೂ ಗ್ರಾಮ ಬೇಲಿಗಳ ಅಮರಾಯಿ ಮತ್ತು ಅಮರಾಯಿ ಬೇಲಿಗಳಲ್ಲಿ ದೊರಯುವ ಪಸಾರೇ ಹುಟ್ಟುವಳಿಗಳನ್ನ 1895ನೇ ಜುಲೈ ಮಾಹೆ 1ನೇ ತಾರೀಖು ಲಾಗಾಯತು 1896ನೇ ಇಸವಿ ಜೂನ್ 30ನೇ ತಾರೀಖಿನ ವರಿಗೆ ಜಮೀನಿಸುವ ಹಕ್ಕುದಾರಿಯು ಬಹಿರಂಗವಾವ ಹರಾಜು ಮೂಲಕ ತಾಲ್ಲೂಕುವಾರಾಗಿಯೂ ಅಥವಾ ಹೋಬಳಿವಾರಾಗಿಯೂ, ಸರಕಾರಕ್ಕೆ ಅನುಕೂಲಿಸುವ ರೀತಿಯಾಗಿ ಈ ಕೆಳಗೆ ವಿವರಿಸಿ ಇರುವ ಆಫಿಸರವರಿಂದ ಈ ಕೆಳಗೆ ಕಂಡ ತಾರೀಖುಗಳಲ್ಲಿ ವಿಕ್ರಯಿಸಲ್ಪಡುವದು.